# ವಾರ್ತಾ ಪತ್ರಿಕೆ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ನಂದಿನಗರ, ಅಂಚೆ ಪೆಟ್ಟಿಗೆ ಸಂ. 06, ಬೀದರ - 585 226

ಸಂಪುಟ-20, ಸಂಚಿಕೆ-1 ಜನವರಿ-ಜೂನ್, 2024

## ಕುಲಪತಿಗಳ ಮುನ್ನುಡಿ



ವಿಶ್ವವಿದ್ಯಾಲಯವು ಜನವರಿ ಯಿಂದ ಜೂನ್, 2024 ರ ಅವಧಿಯಲ್ಲಿ ಮಾಡಿದ ಪ್ರಮುಖ ಚಟುವಟಿಕೆಗಳು ಮತ್ತು ಸಾಧನೆಗಳನ್ನು ಈ ವಾರ್ತಾಪತ್ರ ಒಳಗೊಂಡಿದೆ. ಪ್ರಮುಖವಾಗಿ ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡದಿಂದ ನಾಮ ನಿರ್ದೇಶನಗೊಂಡ ರೈತರಾದ ಶ್ರೀ. ಸತ್ಯನಾರಾಯಣ ಬೇಲೇರಿ ಅವರನ್ನು 9ನೇ ಮೇ, 2024 ರಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ "ಪದ್ಮಶ್ರೀ" ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಕ.ಪ.ಪ.ಮೀ.ವಿ.ವಿ.ನ ಬೀದರನ 19ನೇ ಸಂಸ್ಥಾಪನಾ ದಿನವನ್ನು 17ನೇ ಜನವರಿ, 2024 ರಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಸಂತೋಷ ಉಮಾಕಾಂತ ಪಾಟೀಲ್, ಚಿದ್ರಿ, ಬೀದರ ಇವರಿಗೆ "ಅತ್ಯುತ್ತಮ ರೈತ" ಪ್ರಶಸ್ತಿ ಮತ್ತು ಶ್ರೀಮತಿ. ಗೀತಾ ಮಾರುತಿ ಖಾಶೆಂಪುರೆ, ಖಾಶೆಂಪುರ, ಬೀದರ ಅವರಿಗೆ "ಅತ್ಯುತ್ತಮ ರೈತ ಮಹಿಳೆ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದಲ್ಲದೇ, ಬಾಹ್ಯ ಮೂಲಗಳಿಂದ ಅನುದಾನವನ್ನು ಪಡೆದ ಎಂಟು ಯೋಜನೆಗಳ ಪ್ರಧಾನ ಸಂಶೋಧಕರಿಗೆ ಹಾಗೂ ಸಹಸಂಶೋಧಕರಿಗೆ 'ಪ್ರಶಂಸಾ ಪ್ರಮಾಣ ಪತ್ರ' ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುವೈದ್ಯಾಧಿಕಾರಿಗಳಿಗೆ "ಬರಗಾಲದಲ್ಲಿ ಜಾನುವಾರುಗಳ ನಿರ್ವಹಣೆ" ಕುರಿತು ಎರಡು ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಯಿತು.

ಈ ಅವಧಿಯಲ್ಲಿ ನಮ್ಮ ಸಿಬ್ಬಂದಿಯವರು ವಿವಿಧ ರೀತಿಯ ಸಾಧನೆಗಳೊಂದಿಗೆ ಹಲವಾರು ವಿಸ್ತರಣಾ ಚಟುವಟಿಕೆಗಳನ್ನು ಆಯೋಜಿಸಿದ್ದಾರೆ. ಈ ಸುದ್ದಿ ಪತ್ರದ ಆವೃತ್ತಿಯನ್ನು ಹೊರತರಲು ವಿಸ್ತರಣಾ ನಿರ್ದೇಶಕರು ಮತ್ತು ಅವರ ತಂಡದವರ ಪ್ರಯತ್ನಗಳನ್ನು ಪ್ರಶಂಸಿಸುತ್ತೇನೆ.

ಸಹಿ
(ಕೆ.ಸಿ. ವೀರಣ್ಣ)
ಕುಲಪತಿಗಳು

## ಸಂಪಾದಕೀಯ ನುಡಿ

ನಮ್ಮ ವಿಶ್ವವಿದ್ಯಾಲಯದ ಜನವರಿ ಯಿಂದ ಜೂನ್, 2024 ರವರೆಗಿನ ಸುದ್ದಿ ಪತ್ರದ ಸಂಪುಟ ಸಂಖ್ಯೆ-20 ಮತ್ತು ಸಂಚಿಕೆ-1ನ್ನು ನಿಮ್ಮ ಮುಂದಿಡಲು ನನಗೆ ಬಹಳ ಹರ್ಷವೆನಿಸುತ್ತಿದೆ. ನಮ್ಮ ವಿಶ್ವವಿದ್ಯಾಲಯದ ಶಿಕ್ಷಕರು ಮತ್ತು ಇತರ ಸಿಬ್ಬಂದಿ ಸದಸ್ಯರು, ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳು ಸೇರಿದಂತೆ ಎಲ್ಲಾ ಪ್ರಮುಖ ಘಟನೆಗಳನ್ನು ಒಳಗೊಂಡ ಈ ಸುದ್ದಿ ಪತ್ರವನ್ನು ಹೊರತರಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಗಿದೆ. ನಮ್ಮ ಹಲವಾರು ಶಿಕ್ಷಕರು ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆಯುವ ಮೂಲಕ ನಮ್ಮ ವಿಶ್ವವಿದ್ಯಾಲಯಕ್ಕೆ ಹೆಮ್ಮೆ ತಂದಿದ್ದಾರೆ ಎಂದು ಹೇಳಲು ಹರ್ಷವೆನಿಸುತ್ತಿದೆ.

ಸಹಿ
(ಬಸವರಾಜ ಅವಟಿ)
ಮುಖ್ಯ ಸಂಪಾದಕರು ಮತು ವಿಸ್ತರಣಾ ನಿರ್ದೇಶಕರು

## ಕ.ಪ.ಪ.ಮೀ.ವಿ.ವಿ. ಬೀದರನಲ್ಲಿ ಅಧಿಕಾರಿಗಳ ನೇರ ನೇಮಕಾತಿ.

(Notification E-Office No. R/KVAFSU /93/2023/4468 Dated: 22-12-2023)



ಡಾ. ಬಿ. ವಿ. ಶಿವಪ್ರಕಾಶ
ಸಂಶೋಧನಾ ನಿರ್ದೇಶಕರು



ಡಾ. ಬಸವರಾಜ ಅವಟಿ
ವಿಸ್ತರಣಾ ನಿರ್ದೇಶಕರು



ಡಾ. ಡಿ. ದಿಲೀಪಕುಮಾರ
ಶಿಕ್ಷಣ ನಿರ್ದೇಶಕರು (ಸ್ನಾ)



ಡಾ. ಎನ್.ಕೆ. ಶಿವಕುಮಾರ ಗೌಡ
ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು



ಡಾ. ಎಂ.ಕೆ. ತಾಂಡಲೆ
ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ



ಡಾ. ರಾಮಚಂದ್ರ, ಬಿ.
ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ



ಡಾ. ಪ್ರಕಾಶ್, ಎನ್.
ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ



ಡಾ. ಓ.ಆರ್. ನಟರಾಜು
ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ



ಡಾ. ಎನ್.ಎ. ಪಾಟೀಲ
ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿ



ಡಾ. ಎಚ್.ಎನ್.ಆಂಜನೇಯಪ್ಪ
ಡೀನ್, ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು



ಡಾ. ಎಚ್.ಅರುಣ್ ಕುಮಾರ್
ಡೀನ್, ಹೈನು ವಿಜ್ಞಾನ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು



ಡಾ. ಡಿ. ರತ್ನಮ್ಮ
ನಿರ್ದೇಶಕರು, ಪಶು ಆರೋಗ್ಯ ಮತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು

## ಪ್ರಮುಖ ಕಾರ್ಯಕ್ರಮಗಳು

### ದಕ್ಷಿಣ ಕನ್ನಡದ ರೈತನಿಗೆ ಪದ್ಮಶ್ರೀ ಪ್ರಶಸ್ತಿ

ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣಕನ್ನಡ), ಮಂಗಳೂರು ಇವರೊಂದಿಗೆ ನಿರಂತರ ಸಂಪರ್ಕದಲ್ಲಿರುವ ಕೃಷಿಕರಾದ ಶ್ರೀ ಸತ್ಯನಾರಾಯಣ ಬೇಲೇರಿ, ಇವರು ಮೂಲತಃ ಕರ್ನಾಟಕದ ಗಡಿಯಲ್ಲಿರುವ ಕಾಸರಗೋಡು ಜಿಲ್ಲೆಯ ನೆಟ್ಟಣಿಗೆ ಗ್ರಾಮದವರು. ಇವರು ಸುಮಾರು 650 ಕ್ಕಿಂತ ಹೆಚ್ಚು ತಳಿಗಳ ಭತ್ತದ ಬೀಜಗಳನ್ನು ಸಂರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಇವರ ಪರಿಶ್ರಮವನ್ನು ನಮ್ಮ ಕೃಷಿ ವಿಜ್ಞಾನ ಕೇಂದ್ರದ ಮುಖಾಂತರ ಗುರುತಿಸಿ ಅವರ ಹೆಸರನ್ನು ಪದಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಿ ಕಳುಹಿಸಲಾಗಿತ್ತು. ಇವರ ಪರಿಶ್ರಮಕ್ಕೆ 9ನೇ ಮೇ, 2024ರಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಇವರಿಗೆ "ಪದ್ಮಶ್ರೀ" ಪ್ರಶಸ್ತಿಯನ್ನು ಭಾರತದ ರಾಷ್ಟ್ರಪತಿಯವರು ಪ್ರದಾನ ಮಾಡಿದರು.




### ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ 19ನೇ ಸಂಸ್ಥಾಪನಾ ದಿನಾಚರಣೆ

- ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ 19ನೇ ಸಂಸ್ಥಾಪನಾ ದಿನಾಚರಣೆಯನ್ನು ಕಪಪಮಿವಿವಿ, ಬೀದರನ ನಂದಿನಗರ ಆವರಣದಲ್ಲಿ 17ನೇ ಜನೆವರಿ, 2024 ರಂದು ವಿಜೃಂಬಣೆಯಿಂದ ಆಚರಿಸಲಾಯಿತು. ತೆಲಂಗಾಣದ ಪಟಂಚೇರುನಲ್ಲಿರುವ ಇಕ್ರಿಸ್ಯಾಟ್‌ನ ಪ್ರಧಾನ ವಿಜ್ಞಾನಿ ಮತ್ತು ಕಾರ್ಯತಂತ್ರದ ಸಲಹೆಗಾರರಾದ ಡಾ॥ ಶ್ರೀನಾಥ ದಿಕ್ಷಿತ್ ರವರು ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಹಾಗೂ ಬೀದರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಗೋವಿಂದ ರೆಡ್ಡಿ ರವರು ಗೌರವ ಅತಿಥಿಗಳಾಗಿ ಭಾಗವಹಿಸಿದರು. ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ॥ ಕೆ.ಸಿ. ವೀರಣ್ಣರವರು ಅಧ್ಯಕ್ಷತೆ ವಹಿಸಿದ್ದರು ಹಾಗೂ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿಯ ಸದಸ್ಯರು ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಆಹ್ವಾನಿತರು ಹಾಗೂ ರೈತರು ಭಾಗವಹಿಸಿದ್ದರು.
- 19ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಡಾ.ಎನ್.ಬಿ. ಶ್ರೀಧರ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಇವರಿಗೆ "ಅತ್ಯುತ್ತಮ ಶಿಕ್ಷಕ ಪ್ರಶಸ್ತಿ" ಮತ್ತು ಶ್ರೀ. ಪ್ರಭಾಕರ್, ಎಸ್.ವಿ. ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ರವರಿಗೆ "ಅತ್ಯುತ್ತಮ ಬೋಧಕೇತರ ಸಿಬ್ಬಂದಿ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬೀದರ ಜಿಲ್ಲೆಯ ಚಿದ್ರಿಯ ಶ್ರೀ ಸಂತೋಷ ಉಮಾಕಾಂತ ಪಾಟೀಲ ರವರಿಗೆ "ಅತ್ಯುತ್ತಮ ಕೃಷಿಕ" ಪ್ರಶಸ್ತಿ ಮತ್ತು ಶ್ರೀಮತಿ. ಗೀತಾ ಮಾರುತಿ ಖಾಶೆಂಪೂರೆ, ಮು॥ ಖಾಶೇಂಪೂರ, ಬೀದರ ಜಿಲ್ಲೆ ಇವರಿಗೆ "ಅತ್ಯುತ್ತಮ ಕೃಷಿಕ ಮಹಿಳೆ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಇದಲ್ಲದೆ, ಬಾಹ್ಯ ಮೂಲಗಳಿಂದ ಅನುದಾನವನ್ನು ಪಡೆದ ಎಂಟು ಯೋಜನೆಗಳ ಪ್ರಧಾನ ಸಂಶೋಧಕರಿಗೆ ಹಾಗೂ ಸಹಸಂಶೋಧಕರಿಗೆ 'ಪ್ರಶಂಸಾ ಪ್ರಮಾಣ ಪತ್ರ' ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುವೈದ್ಯಾಧಿಕಾ–ರಿಗಳಿಗೆ "ಬರಗಾಲದಲ್ಲಿ ಜಾನುವಾರುಗಳ ನಿರ್ವಹಣೆ" ಕುರಿತು ಎರಡು ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಯಿತು.



## ಆಯೋಜಿತ ತರಬೇತಿಗಳು / ಕಾರ್ಯಾಗಾರಗಳು / ಸಮಾವೇಶಗಳು / ವಿಚಾರ ಸಂಕೀರಣಗಳು / ಪ್ರದರ್ಶನಗಳು / ಪಶು ಆರೋಗ್ಯ ಶಿಬಿರಗಳು /ಕ್ಷೇತ್ರ ದಿನಗಳು:

### ವಿಸ್ತರಣಾ ನಿರ್ದೇಶನಾಲಯ, ಕ.ಪ.ಪ.ಮೀ.ವಿ.ವಿ. ಬೀದರ

- ವಿಸ್ತರಣಾ ನಿರ್ದೇಶನಾಲಯ, ಕ.ಪ.ಪ.ಮೀ.ವಿ.ವಿ. ಬೀದರ ಮತ್ತು ಐಸಿಎಆರ್–ಎಸ್‌ಸಿಎಸ್‌ಪಿ ಯೋಜನೆ, ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಬೀದರನ ಸಹಯೋಗದಲ್ಲಿ ಬರಗಾಲದಲ್ಲಿ ಜಾನುವಾರುಗಳ ವೈಜ್ಞಾನಿಕ ನಿರ್ವಹಣೆ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರವನ್ನು 19ನೇ ಸಂಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ 17 ರಿಂದ 18ನೇ ಜನವರಿ, 2024 ರಂದು ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ಪಶುವೈದ್ಯಾಧಿಕಾರಿಗಳಿಗೆ ಕ.ಪ.ಪ.ಮೀ.ವಿ.ವಿ. ಬೀದರನಲ್ಲಿ ಆಯೋಜಿಸಲಾಗಿತ್ತು. ಸುಮಾರು 105 ಪಶುವೈದ್ಯಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



- ವಿಸ್ತರಣಾ ನಿರ್ದೇಶನಾಲಯ, ಕ.ಪ.ಪ.ಮೀ.ವಿ.ವಿ. ಬೀದರ ಮತ್ತು ಐಸಿಎಆರ್–ಎಸ್‌ಸಿಎಸ್‌ಪಿ ಯೋಜನೆ, ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಬೀದರನ ಸಹಯೋಗದಲ್ಲಿ 17ನೇ ಜನವರಿ, 2024 ರಂದು ಬರಗಾಲದ ಸಮಯದಲ್ಲಿ ಜಾನುವಾರುಗಳ ವೈಜ್ಞಾನಿಕ ನಿರ್ವಹಣೆಯ ಕುರಿತು ರೈತರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸುಮಾರು 50 ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

- ವಿಸ್ತರಣಾ ನಿರ್ದೇಶನಾಲಯ, ಕ.ಪ.ಪ.ಮೀ.ವಿ.ವಿ. ಬೀದರ ಮತ್ತು ಐಸಿಎಆರ್–ಎನ್ಎಎಚ್ಇಪಿ– ಕಾಂಪೊನೆಂಟ್–2 ಅಡಿಯಲ್ಲಿ 23 ಮತ್ತು 24ನೇ ಜನವರಿ, 2024 ರಂದು "ಬ್ಲೆಂಡೆಡ್ ಲರ್ನಿಂಗ್ ಪ್ಲಾಟ್‌ಫಾರ್ಮ್ ಮತ್ತು ಶೈಕ್ಷಣಿಕ ನಿರ್ವಹಣೆ" ಕುರಿತು ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪ್ರೊ ಕೆ.ಸಿ. ವೀರಣ್ಣ, ಸನ್ಮಾನ್ಯ ಕುಲಪತಿಗಳು ಸದರಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕ.ಪ.ಪ.ಮೀ.ವಿ.ವಿ., ಬೀದರನ ಸುಮಾರು 45 ಬೋಧಕ ಸಿಬ್ಬಂದಿಯವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



**ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು**

- ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ಎರಡು ದಿನಗಳ ರೈತ ತರಬೇತಿ ಕಾರ್ಯಕ್ರಮವನ್ನು ವಿಸ್ತರಣಾ ಶಿಕ್ಷಣ ಕೇಂದ್ರ, ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರಿನಲ್ಲಿ 1 ರಿಂದ 2ನೇ ಫೆಬ್ರವರಿ, 2024 ರಂದು ಆಯೋಜಿಸಲಾಗಿತ್ತು. ಕರ್ನಾಟಕದ ವಿವಿಧ ಭಾಗಗಳಿಂದ ಬಂದ ಸುಮಾರು 50 ರೈತರು ತರಬೇತಿಯ ಸದುಪಯೋಗ ಪಡೆದುಕೊಂಡರು.



- ವಿಸ್ತರಣಾ ಶಿಕ್ಷಣ ಕೇಂದ್ರ, ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು ಮತ್ತು ಭಾ.ಕೃ.ಅ.ಪ. –ರಾಷ್ಟ್ರೀಯ ಪಶುರೋಗ ಸೋಂಕು ಮತ್ತು ಮಾಹಿತಿ ವಿಜ್ಞಾನ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ಮೂರು ದಿನಗಳ ಎರಡು ಉದ್ಯಮಶೀಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ಕಾರ್ಯಕ್ರಮವನ್ನು 28ನೇ ಫೆಬ್ರವರಿ ರಿಂದ 1ನೇ ಮಾರ್ಚ್, 2024 ರ ವರೆಗೆ ಹಮ್ಮಿಕೊಳ್ಳಲಾಗಿತ್ತು. ಅದೇ ರೀತಿಯಾಗಿ, ಹಂದಿ ಸಾಕಾಣಿಕೆ ಕುರಿತು ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು 25 ರಿಂದ 27ನೇ ಮಾರ್ಚ್, 2024 ರವರೆಗೆ ಹಮ್ಮಿಕೊಳ್ಳಲಾಗಿತ್ತು.




- ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನ ಪಶುವೈದ್ಯಕೀಯ ಸೂಕ್ಷ್ಮಜೀವಾಣುಶಾಸ್ತ್ರ ವಿಭಾಗದ ಕಪಪಮಿವಿವಿ–ಸಿವಿಎ–ರೇಬೀಸ್ ರೋಗನಿರ್ಣಯ ಪ್ರಯೋಗಾಲಯವು ಪಿಪಿಎಕೆ, ಬೆಂಗಳೂರು ಮತ್ತು ಕರ್ನಾಟಕ ಪಶುವೈದ್ಯಕೀಯ ಪರಿಷತ್ತು ಇವುಗಳ ಸಹಯೋಗದಲ್ಲಿ "ಪ್ರಾಣಿಗಳ ರೇಬೀಸ್ ರೋಗನಿರ್ಣಯ ಮತ್ತು ನಿಯಂತ್ರಣದಲ್ಲಿ ಪಶುವೈದ್ಯರ ಪಾತ್ರ" ಕುರಿತು ಒಂದು ದಿನದ ತಾಂತ್ರಿಕ ವಿಚಾರ ಸಂಕಿರಣವನ್ನು 13ನೇ ಫೆಬ್ರವರಿ, 2024 ರಂದು ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನಲ್ಲಿ ಆಯೋಜಿಸಲಾಯಿತು.



**ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ**

- ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್‌ನಲ್ಲಿ "ಪಶುವೈದ್ಯರು ಅತ್ಯಗತ್ಯ ಆರೋಗ್ಯ ಕಾರ್ಯಕರ್ತರು" ಎಂಬ ವಿಷಯದ ಮೇಲೆ ವಿಶ್ವ ಪಶುವೈದ್ಯಕೀಯ ದಿನವನ್ನು 27ನೇ ಏಪ್ರಿಲ್, 2024 ರಂದು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನ ಬೋಧಕ, ಬೋಧಕೇತರ ಸಿಬ್ಬಂದಿಯವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ವಾನಗಳಿಗಾಗಿ ಆ್ಯಂಟಿ ರೇಬಿಸ್ ಲಸಿಕಾ ಶಿಬಿರವನ್ನು ಏರ್ಪಡಿಸಲಾಗಿತ್ತು.




**ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ**

- ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಮತ್ತು ಆರ್‌ಎಸ್‌ಇಟಿಐ, ಹುಲಕೋಟಿ, ಗದಗ ಇವರ ಸಹಯೋಗದಲ್ಲಿ 16ನೇ ಏಪ್ರಿಲ್, 2024 ರಂದು ರೈತರಿಗೆ "ವೈಜ್ಞಾನಿಕ ಕುರಿ ಸಾಕಾಣಿಕೆ ಪದ್ಧತಿಗಳು" ವಿಷಯದ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಒಟ್ಟು 21 ಯುವ ರೈತರು ಭಾಗವಹಿಸಿದ್ದರು.



- 30ನೇ ಏಪ್ರಿಲ್, 2024 ರಂದು ರೈತರಿಗಾಗಿ "ವೈಜ್ಞಾನಿಕ ಹೈನುಗಾರಿಕೆ ಪದ್ಧತಿಗಳು" ಎಂಬ ವಿಷಯದ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 20 ಯುವ ರೈತರು ಭಾಗವಹಿಸಿದ್ದರು.

- 21ನೇ ಮೇ, 2024 ರಂದು ರೈತರಿಗಾಗಿ "ವೈಜ್ಞಾನಿಕ ಕೋಳಿ ಸಾಕಾಣಿಕೆ" ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 18 ಯುವ ರೈತರು ಭಾಗವಹಿಸಿದ್ದರು.

- 26ನೇ ಜೂನ್, 2024 ರಂದು ರೈತರಿಗಾಗಿ "ವೈಜ್ಞಾನಿಕ ಕೋಳಿ ಸಾಕಾಣಿಕೆ" ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ 45ಕ್ಕೂ ಹೆಚ್ಚು ರೈತರು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.



- ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ವತಿಯಿಂದ ಸರಕಾರಿ ಶಾಲೆ ದತ್ತು ಸ್ವೀಕಾರ ಯೋಜನೆಯಡಿ ಹೊಸ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಚೆನ್ನಾಗಿ ಅಭ್ಯಾಸ ಮಾಡಿ ಜೀವನದಲ್ಲಿ ಹೆಚ್ಚಿನ ಸಾಧನೆ ಮಾಡಲು ಪ್ರೇರಣೆ ನೀಡಲಾಯಿತು.



**ಹೈನು ವಿಜ್ಞಾನ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು**

- ಬೆಂಗಳೂರಿನ ಹೈನು ವಿಜ್ಞಾನ ಮಹಾವಿದ್ಯಾಲಯದ ಪ್ರಾಧ್ಯಾಪಕರಿಗೆ 21ನೇ ಫೆಬ್ರವರಿ 2024 ರಂದು "ಎ ರೆಡಿ ಟು ಕುಕ್ ನ್ಯೂಟ್ರಾಸ್ಯುಟಿಕಲ್ಸ್ ಖೀರ್ ಮಿಕ್ಸರ್ ಕಾಂಪೋಜಿಷನ್" ಉತ್ಪನ್ನಕ್ಕೆ ಹಕ್ಕು ಪತ್ರ (ಪೇಟೆಂಟ್) ನೀಡಲಾಯಿತು.

- ದೊಡ್ಡಬಳ್ಳಾಪುರ ತಾಲೂಕು, ಹಾಡೋನಹಳ್ಳಿ ಗ್ರಾಮದಲ್ಲಿ 1ನೇ ಎಪ್ರಿಲ್ ರಿಂದ 7ನೇ ಮೇ, 2024ರವರೆಗೆ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರವನ್ನು ಆಯೋಜಿಸಲಾಯಿತು.



**ಹೈನು ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ**

- ರೈತರಿಗೆ "ಮೌಲ್ಯವರ್ಧಿತ ಹಾಲಿನ ಉತ್ಪನ್ನಗಳ" ಬಗ್ಗೆ 9ನೇ ಫೆಬ್ರವರಿ, 2024 ರಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 30 ರೈತರು ಭಾಗವಹಿಸಿದ್ದರು.

- ರೈತರಿಗೆ "ಶುದ್ಧ ಹಾಲಿನ ಉತ್ಪಾದನೆ" ಬಗ್ಗೆ 2ನೇ ಮಾರ್ಚ, 2024 ರಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 25 ರೈತರು ಭಾಗವಹಿಸಿದ್ದರು.



**ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ (ದೇವಣಿ), ಹಳ್ಳಿಖೇಡ**

- ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಬೀದರ ಮತ್ತು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಬೀದರ ಹಾಗೂ ಕಲಬುರಗಿಯ ಸಹಭಾಗಿತ್ವದಲ್ಲಿ ಈ ಎರಡೂ ಜಿಲ್ಲೆಯ ಪಶು-ಸಖಿಯರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು 29ನೇ ಮೇ, 2024ರಂದು ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಬೀದರನಲ್ಲಿ ಆಯೋಜಿಸಲಾಗಿತ್ತು. ವೈಜ್ಞಾನಿಕ ಜಾನುವಾರು ನಿರ್ವಹಣಾ ಪದ್ಧತಿ ಮತ್ತು ಸುಸ್ಥಿರ ಹೈನುಗಾರಿಕೆಯ ಮಹತ್ವತೆ ಕುರಿತು ಮಾಹಿತಿ ನೀಡಲಾಯಿತು. ಈ ತರಬೇತಿಯಲ್ಲಿ ಸುಮಾರು 60 ಪಶು-ಸಖಿಯರು ಭಾಗವಹಿಸಿದ್ದರು.



- ವೈಜ್ಞಾನಿಕ ಹೈನುಗಾರಿಕೆ ತರಬೇತಿ ಕಾರ್ಯಕ್ರಮವನ್ನು ರಿಲಾಯಿನ್ಸ ಫೌಂಡೇಶನ ಮತ್ತು ಪ್ರವರ್ಧ ಸಂಸ್ಥೆ, ಬೀದರ ಇವರ ಸಹಯೋಗದೊಂದಿಗೆ ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಬೀದರನಲ್ಲಿ 12ನೇ ಜೂನ, 2024ರಂದು ಆಯೋಜಿಸಲಾಯಿತು. ಈ ತರಬೇತಿಯಲ್ಲಿ ಸುಮಾರು 45 ಜನ ರೈತ ಮತ್ತು ರೈತ ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



## ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಅಂಕೋಲ

- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು ಮತ್ತು ಮೀ.ಸಂ.ಮಾ.ಕೇ(ಕ) ಅಂಕೋಲಾ ಇವರ ಸಹಯೋಗದೊಂದಿಗೆ 6ನೇ ಮಾರ್ಚ, 2024 ರಂದು "ಸಮಗ್ರ ಮೀನು ಕೃಷಿ ಪದ್ದತಿಗಳು" ಎಂಬ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 86 ರೈತರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



- 30ನೇ ಮೇ, 2024 ರಂದು ಕೃ.ವಿ.ವಿ. ಧಾರವಾಡ ಮತ್ತು ಮೀ.ಸಂ.ಮಾ.ಕೇಂದ್ರ(ಕ), ಅಂಕೋಲಾ ಸಹಯೋಗದಲ್ಲಿ ಸೀಗಡಿ/ಮೀನಿನ ಉಪ್ಪಿನಕಾಯಿ ತಯಾರಿಕೆಯ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 23 ರೈತರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.




## ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ–ಮಂಗಳೂರು

- ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ, ದ.ಕ ಹಾಗೂ ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೋದನಾ ಕೇಂದ್ರ, ಬ್ರಹ್ಮಾವರ ಇವರ ಸಹಯೋಗದೊಂದಿಗೆ ತೋಟಗಾರಿಕಾ ಇಲಾಖೆಯ ತ್ರೈಮಾಸಿಕ ಕಾರ್ಯಾಗಾರವನ್ನು 17ನೇ ಜನವರಿ, 2024 ರಂದು ತೋಟಗಾರಿಕಾ ಇಲಾಖೆ, ಮಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ನ್ಯಾನೋ ಗೊಬ್ಬರಗಳ ಬಳಕೆಯ ಬಗ್ಗೆ ಮಾಹಿತಿ ನೀಡಲಾಯಿತು. ಒಟ್ಟು 25 ವಿಸ್ತರಣಾ ಅಧಿಕಾರಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.



- 19ನೇ ಜನವರಿ, 2024 ರಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಜ್ಪೆಯ ಸದಸ್ಯರಿಗೆ ಆರ್ಥಿಕ ಲಾಭ ಮತ್ತು ಸುಸ್ಥಿರ ಜೀವನೋಪಾಯಕ್ಕಾಗಿ ಸಮಗ್ರ ಮೀನು ಸಾಕಣೆ ಮತ್ತು ಅಲಂಕಾರಿಕ ಮೀನು ಕೃಷಿ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



- ಅಂಬೇಡ್ಕರ್ ಆಪದ್ಬಾಂದವ ಟ್ರಸ್ಟ್, ಪುತ್ತೂರಿನ ಸಹಯೋಗದಲ್ಲಿ 8ನೇ ಫೆಬ್ರವರಿ, 2024ರಂದು ಧರ್ಮಸ್ಥಳದ ಗ್ರಾಮ ಪಂಚಾಯತ್‌ನಲ್ಲಿ ಪೌಷ್ಠಿಕ ಕೈತೋಟ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಒಟ್ಟು 40 ಪರಿಶಿಷ್ಟ ಪಂಗಡದ ರೈತರಿಗೆ ಸಿಕೇಚರ್ ಮತ್ತು ಗಟರ್ ಸ್ವೇಯರ್ ಪರಿಕರಗಳನ್ನು ಒದಗಿಸಲಾಯಿತು.



- 10ನೇ ಫೆಬ್ರವರಿ, 2024ರಂದು ಪುತ್ತೂರಿನ ಡಾ. ಅಂಬೇಡ್ಕರ್ ಭವನದಲ್ಲಿ ಬೋರ್ಡೆಕ್ಸ್ ಮಿಶ್ರಣ ತಯಾರಿಕೆಯ ಮಹತ್ವ ಮತ್ತು ಅಡಿಕೆಯಲ್ಲಿ ಶಿಲೀಂಧ್ರ ರೋಗಗಳ ನಿರ್ವಹಣೆಯ ಕುರಿತು ತರಬೇತಿ ಕಾರ್ಯಕ್ರಮವನ್ನು ಅಯೋಜಿಸಲಾಗಿತ್ತು. ಇದರೊಂದಿಗೆ ಒಟ್ಟು 30 ಪರಿಶಿಷ್ಟ ಜಾತಿಯ ರೈತರಿಗೆ ತಲಾ 200ಲೀ. ಸಾಮರ್ಥ್ಯದ ಪ್ಲಾಸ್ಟಿಕ್ ಬ್ಯಾರಲ್ ಮತ್ತು ಡಬಲ್ ವೀಲ್ ಬ್ಯಾರೋಗಳನ್ನು ವಿತರಿಸಲಾಯಿತು.

- ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು (ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ), ಭಾರತ ಸರ್ಕಾರದ ಪ್ರಯೋಜಕತ್ವದಲ್ಲಿ "ತೆಂಗಿನ ಮರದ ಸ್ನೇಹಿತರು" ಎಂಬ ವಿಷಯದ ಬಗ್ಗೆ ತೆಂಗಿನ ಮರ ಹತ್ತುವ ಆರು ದಿನಗಳ ತರಬೇತಿ ಕಾರ್ಯಕ್ರಮವನ್ನು 12 ರಿಂದ 17ನೇ ಫೆಬ್ರವರಿ, 2024 ರವರೆಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ನಿರುದ್ಯೋಗಿ ಯುವಕರಿಗೆ ತೆಂಗಿನ ಮರ ಹತ್ತುವ ಕಲೆಯಲ್ಲಿ ಕೌಶಲ್ಯ ತರಬೇತಿಯನ್ನು ನೀಡಲಾಯಿತು.



- ಭಾ.ಕೃ.ಅ.ಪ.–ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರಲ್ ರಿಸರ್ಚ್ ಮ್ಯಾನೇಜ್‌ಮೆಂಟ್, ಹೈದರಾಬಾದ್‌ನ ಪ್ರಾಯೋಜಿತ ಪರಿಶಿಷ್ಟ ಜಾತಿಯ ರೈತರಿಗೆ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ಜೇನು ಕೃಷಿ ಕುರಿತು 5 ದಿನಗಳ ತರಬೇತಿ ಕಾರ್ಯಕ್ರಮವನ್ನು 19 ರಿಂದ 25ನೇ ಫೆಬ್ರವರಿ, 2024ರ ವರೆಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು.




- ನೈಸರ್ಗಿಕ ಕೃಷಿಯ ಕುರಿತು ತರಬೇತಿ ಹಾಗೂ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಬಂಟ್ವಾಳ ತಾಲೂಕಿನ ಮೂಡಂಬೈಲು ಗ್ರಾಮದಲ್ಲಿ 29ನೇ ಫೆಬ್ರವರಿ, 2024 ರಂದು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ತಾಂತ್ರಿಕ ಅಧಿಕಾರಿ ಹಾಗೂ 12 ಜನ ಪರಿಶಿಷ್ಟ ಪಂಗಡದ ರೈತರು ಭಾಗವಹಿಸಿದ್ದರು.




- ಬಂಟ್ವಾಳ ತಾಲೂಕಿನ ಲೋರೆಟ್ಟೊ ಗ್ರಾಮದಲ್ಲಿ 4ನೇ ಮಾರ್ಚ, 2024 ರಂದು ಅಡಿಕೆಯಲ್ಲಿ ಸುಳಿ ಕೊಳೆ ರೋಗದ ಸಮಗ್ರ ನಿರ್ವಹಣೆಯ ಕುರಿತು ಸಾಮಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 19 ರೈತರು ಭಾಗವಹಿಸಿದ್ದರು.



- ಭಾ.ಕೃ.ಅ.ಪ.–ಕೃಷಿ ವಿಜ್ಞಾನ ಕೇಂದ್ರ (ದ.ಕ), ಮಂಗಳೂರು ಮತ್ತು ಜೆ.ಎನ್.ವಿ ಶಾಲೆ, ಮುಡಿಪು ಇವರ ಸಹಯೋಗದಲ್ಲಿ ಮಣ್ಣಿನ ಪರೀಕ್ಷೆಯ ಮಹತ್ವ ಮತ್ತು ಮಣ್ಣು ಮಾದರಿಯನ್ನು ಸಂಗ್ರಹಿಸುವ ವಿಧಾನದ ಕುರಿತು ಶಾಲಾ ವಿದ್ಯಾರ್ಥಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು 17ನೇ ಎಪ್ರಿಲ್, 2024 ರಂದು ಮುಡಿಪು ಜೆ.ಎನ್.ವಿ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 128 ವಿದ್ಯಾರ್ಥಿಗಳು ಭಾಗವಹಿಸಿದ್ದರು.



- 30ನೇ ಮೇ, 2024 ರಂದು ಬೆಳ್ತಂಗಡಿಯ ಬಡಕೋಡಿಯಲ್ಲಿ ಅಧಿಕ ಇಳುವರಿ ಕೊಡುವ ಹೀರೆಕಾಯಿ (ಅರ್ಕ ಪ್ರಸನ್ನ ತಳಿ)ಯ ಮುಂಚೂಣಿ ಪ್ರಾತ್ಯಕ್ಷಿಕೆ ಕಾರ್ಯಕ್ರಮದಡಿ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಒಟ್ಟು 15 ರೈತರು ಭಾಗವಹಿಸಿದ್ದರು. ಅದರಲ್ಲಿ ಆಯ್ದ ಐದು ರೈತರಿಗೆ ಅರ್ಕ ಪ್ರಸನ್ನ ತಳಿಯ ಬೀಜ ಮತ್ತು ಅದಕ್ಕೆ ಬೇಕಾದ ಅರ್ಕಾ ತರಕಾರಿ ವಿಶೇಷ, ಸೂಕ್ಷ್ಮಾಣು ಜೀವಿಗಳಿರುವ ಮಿಶ್ರಣ ಮತ್ತು ಇತರೆ ಪರಿಕರಗಳನ್ನು ನೀಡಲಾಯಿತು.



- ಭಾ.ಕೃ.ಅ.ಪ.–ಐ.ಐ.ಹೆಚ್.ಆರ್., ಬೆಂಗಳೂರು ಇವರ ಸಹಯೋಗದೊಂದಿಗೆ ಪುತ್ತೂರು ತಾಲೂಕಿನ ಬುಡಕಟ್ಟು ರೈತರಿಗೆ ತೋಟಗಾರಿಕಾ ಬೆಳೆಗಳಲ್ಲಿ ತಂತ್ರಜ್ಞಾನದ ಬ್ಯಾಕ್‌ಸ್ಟಾಪಿಂಗ್ ಕಾರ್ಯಕ್ರಮವನ್ನು ಟಿ.ಎಸ್.ಪಿ. ಕಾರ್ಯಕ್ರಮದಡಿಯಲ್ಲಿ ಆಯೋಜಿಸಲಾಯಿತು. ಕೃಷಿ ಸಖಿಯರೂ ಸೇರಿದಂತೆ 65 ಜನ ಬುಡಕಟ್ಟು ರೈತರು ಮತ್ತು ಸ್ವಸಹಾಯ ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಪಶು ಆರೋಗ್ಯ ಮತು ಜೈವಿಕ ಸಂಸ್ಥೆ, ಬೆಂಗಳೂರು**

- ಪಶು ಆರೋಗ್ಯ ಮತು ಜೈವಿಕ ಸಂಸ್ಥೆಯ ಗುಣಮಟ್ಟ ನಿರ್ವಹಣೆ ವಿಭಾಗವು "ಸಿಜಿಎಂಪಿ ಇನ್ ವೆಟರಿನರಿ ವ್ಯಾಕ್ಸಿನ್ ಅಂಡ್ ಬಯಾಲಾಜಿಕಲ್ಸ" ಎಂಬ ವಿಷಯದ ಕುರಿತು 8 ರಿಂದ 12ನೇ ಜನವರಿ, 2024 ರವರೆಗೆ 5 ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತು.



- ರೈತರಿಗಾಗೆ 15ನೇ ಫೆಬ್ರವರಿ, 2024 ರಂದು "ಕೆಚ್ಚಲು ಬಾವು" ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



**ಪಶುಸಂಗೋಪನಾ ಪಾಲಿಟೆಕ್ನಿಕ್, ಕುನ್ನೂರು, ಶಿಗ್ಗಾವಿ**

- ರೈತರಿಗೆ 7 ಮತ್ತು 8ನೇ ಫೆಬ್ರುವರಿ, 2024 ರಂದು ಜಾನುವಾರುಗಳ ನಿರ್ವಹಣೆ ಬಗ್ಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.




**ಪಶುಸಂಗೋಪನಾ ಪಾಲಿಟೆಕ್ನಿಕ್, ತಿಪಟೂರು, ಕೊನೇಹಳ್ಳಿ**

- ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವುದರ ಮೂಲಕ 5ನೇ ಜೂನ, 2024 ರಂದು ಆಚರಿಸಲಾಯಿತು.



## ಪ್ರಶಸ್ತಿಗಳು / ಮನ್ನಣೆಗಳು

| # | ವಿಜ್ಞಾನಿಯ ಹೆಸರು | ಪ್ರಶಸ್ತಿ | ದಿನಾಂಕ | ಆಯೋಜಕರು |
|---|---|---|---|---|
| 1 | ಡಾ. ಗಂಗಾ ನಾಯಕ | ಅತ್ಯುತ್ತಮ ಪಶುವೈದ್ಯ ಪ್ರಶಸ್ತಿ | 27ನೇ ಏಪ್ರಿಲ್, 2024 | ಕರ್ನಾಟಕ ಪಶುವೈದ್ಯಕೀಯ ಪರಿಷತ್, ಬೆಂಗಳೂರು |
| 2 | ಡಾ. ಡಿ. ರತ್ನಮ್ಮ | ಗೌರವಾನ್ವಿತ ಮಹಿಳಾ ಸಂಶೋಧಕಿ ಪ್ರಶಸ್ತಿ | 2ನೇ ಮಾರ್ಚ್, 2024 | 9ನೇ ವಾರ್ಷಿಕ ಸಭೆ ಚೆನ್ನೈ, |
| 3 | ಡಾ. ಶಿಲ್ಪಶ್ರೀ. ಬಿ.ಜಿ | ಅತ್ಯುತ್ತಮ ಪೋಸ್ಟರ್ ಪ್ರಸ್ತುತಿ ಪ್ರಶಸ್ತಿ | 4-6ನೇ ಮಾರ್ಚ್, 2024 | 50ನೇ ಡೈರಿ ಇಂಡಸ್ಟ್ರಿ ಸಮ್ಮೇಳನ, ಐಡಿಎ(IDA), ಹೈದರಾಬಾದ್ |
| 4 | ಡಾ. ಕೇದಾರನಾಥ | ನವೀನ/ಹೊಸದಾದ ಲೇಖನ ಪ್ರಶಸ್ತಿ | 15ನೇ ಮೇ, 2024 | ಕೃಷಿ ಮತ್ತು ಆಹಾರ ಇ-ಸುದ್ದಿ ಪತ್ರ |
| 5 | ಡಾ. ರಶ್ಮಿ, ಎಲ್. | ಮೌಖಿಕ ಪ್ರಸ್ತುತಿ ಪ್ರಶಸ್ತಿ- ತೃತೀಯ ಸ್ಥಾನ | 30 -31ನೇ ಮೇ, 2024 | ಭಾರತೀಯ ಮಹಿಳಾ ಪಶುವೈದ್ಯರ ಸಂಘ (IAWV-K)- ಮೈಸೂರು, ಕರ್ನಾಟಕ |
| 6 | ಡಾ. ರಶ್ಮಿ, ಎಲ್. | ಅತ್ಯುತ್ತಮ ಪೋಸ್ಟರ್ ಪ್ರಸ್ತುತಿ ಪ್ರಶಸ್ತಿ | 30-31ನೇ ಮೇ, 2024 | ಭಾರತೀಯ ಮಹಿಳಾ ಪಶುವೈದ್ಯರ ಸಂಘ (IAWV-K)- ಮೈಸೂರು, ಕರ್ನಾಟಕ |
| 7 | ಶ್ರೀಮತಿ. ಅನಿತಾ, ಎಂ. | ಬುಡಕಟ್ಟು ಡೈರಿ ಫಾರ್ಮ್ ಮಹಿಳಾ ಪ್ರಶಸ್ತಿ (ಕೃಷಿ ವಿಜ್ಞಾನ ಕೇಂದ್ರ ಸಂಪರ್ಕದ ಕೃಷಿಕ) | 30 -31ನೇ ಮೇ, 2024 | ಭಾರತೀಯ ಮಹಿಳಾ ಪಶುವೈದ್ಯರ ಸಂಘ (IAWV-K)- ಮೈಸೂರು, ಕರ್ನಾಟಕ |

**ಪ್ರಧಾನ ಸಂಪಾದಕರು**
**ಡಾ. ಬಸವರಾಜ ಅವಟಿ**
ವಿಸ್ತರಣಾ ನಿರ್ದೇಶಕರು
ಕ.ಪ.ಪ.ಮೀ.ವಿ.ವಿ, ಬೀದರ

**ಸಹ ಸಂಪಾದಕರು**
**ಡಾ. ಪ್ರಕಾಶಕುಮಾರ ರಠೋಡ**
ಸಹ ಪ್ರಾಧ್ಯಾಪಕರು,
ವಿಸ್ತರಣಾ ನಿರ್ದೇಶನಾಲಯ,
ಕ.ಪ.ಪ.ಮೀ.ವಿ.ವಿ, ಬೀದರ

**ಸಹಾಯಕ ಸಂಪಾದಕರು**
**ವೈಶಾಲಿ ಮಟಪತಿ**
ಸಹಾಯಕ ಪ್ರಾಧ್ಯಾಪಕರು,
ವಿಸ್ತರಣಾ ನಿರ್ದೇಶನಾಲಯ,
ಕ.ಪ.ಪ.ಮೀ.ವಿ.ವಿ, ಬೀದರ

**ಮುದ್ರಿತ ವಿಷಯ** **ತೆರೆದ ಅಂಚೆ**
**ಇವರಿಗೆ,**

__________________________

__________________________

**ಬಟವಡೆಯಾಗದಿದ್ದಲ್ಲಿ ಈ ವಿಳಾಸಕ್ಕೆ ಹಿಂದಿರುಗಿಸಿ :**
**ವಿಸ್ತರಣಾ ನಿರ್ದೇಶಕರು**
ಕ.ಪ.ಪ.ಮೀ.ವಿ.ವಿ. ನಂದಿನಗರ, ಅಂಚೆ ಪೆಟ್ಟಿಗೆ ಸಂಖ್ಯೆ–06, ಬೀದರ–585 226, ಕರ್ನಾಟಕ
ಮಿಂಚಂಚೆ: dekvafsu@gmail.com

